# ಭಾ. ಕೃ. ಅ. ಪ. – ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥಾನ, ನಾಗ್ಪುರ್

## ಹತ್ತಿ ಬೆಳೆಯಲು ಸಾಪ್ತಾಹಿಕ ಸಲಹೆ, 4-10 ಜನೇವರಿ 2016ರ ಅವಧಿಯಲ್ಲಿ

## ಹವಾಮಾನ ಸಲಹೆ

| ಕರ್ನಾಟಕ | ಸಲಹೆ, ಜನೇವರಿ 4-10, 2016 |
|---|---|
| ಗುಲಾಬಿ ಕಾಯಿಕೊರಕದ ಬದುಕಿರುವ ಮರಿಗಳು ಮತ್ತು ಅದರ ಹಾನಿಯೂ ಬೋಲ್ ಗಾರ್ಡ್ - 2 ಮಿಶ್ರತಳಿಗಳಲ್ಲಿ ಗುಜರಾತ್, ಆಂಧ್ರಪ್ರದೇಶ, ತೆಲಂಗಣ, ಮಧ್ಯ ಪ್ರದೇಶ್, ಮಹಾರಾಷ್ಟ್ರ ಮತ್ತು ಕರ್ನಾಟಕದ ಕೆಲವು ಭಾಗಗಳಲ್ಲಿ ಕಂಡುಬಂದಿದೆ.ಇದರ ಮತ್ತಷ್ಟು ಹಾನಿಯನ್ನು ತಡೆಯಲು ಕೇಂದ್ರೀಯ ಹತ್ತಿ ಸಂಶೋದನಾ ಸಂಸ್ಥಾನ ಶಿಫ್ಹಾರಸ್ಸು ಮಾಡಿರುವ ಮೇಲ್ವಿಚಾರಣೆ ಮತ್ತು ನಿಯಂತ್ರಣ ಕ್ರಮಗಳನ್ನು ತಕ್ಷಣವೇ ಕೈಗೆತ್ತಿಕೊಳಬೇಕು. | |
| ಧಾರವಾಡ, ಹಾವೇರಿ ಮತ್ತು ಮೈಸೂರು | ಎಲ್ಲಾ ಹತ್ತಿ ಬೆಳೆಯುವ ಪ್ರದೇಶಗಳಲ್ಲಿ , ಹತ್ತಿ ಬೆಳೆ ಪೂರ್ಣಗೊಳ್ಳುವ ಹಂತದಲ್ಲಿದೆ. ಹತ್ತಿಯನ್ನು ಮಾರುಕಟ್ಟೆಗೆ ಕಳುಹಿಸುವ ಮೊದಲು ಶ್ರೇಯಾಂಕವನ್ನು ಮಾಡುವುದರಿಂದ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಯನ್ನು ಪಡೆಯಬಹುದು. ಮರುಬೆಳವಣಿಗೆ ಮತ್ತು ಕೆಲವು ಹೂಗಳು ಮತ್ತು ಹೊಸ ಚಿಗುರು ಪಡೆಯಲು ಹತ್ತಿ ಬೆಳೆಗೆ ನೀರಾವರಿ ಒದಗಿಸುವುದು ಅನಪೇಕ್ಷಿತವಾದಿದ್ದು, ಇದು ಕೀಟ ಮತ್ತು ರೋಗಗಳ ಅಭಿವೃದ್ಧಿಗೆ ಸಹಾಯಕವಾಗುತ್ತದೆ ಮತ್ತು ಮುಂದಿನ ಋತುವಿನ ಸಾಮಾನ್ಯ ಹತ್ತಿ ಬೆಳೆಯ ಮೇಲೂ ಪರಿಣಾಮ ಬೀರುತ್ತದೆ. ಆರಂಬಿಕ ಬಿತ್ತನೆಯ ಬೆಳೆ ಮುಗಿದ ನಂತರ ಹತ್ತಿ ಗಿಡಗಳನ್ನು ಬೇರುಸಹಿತ ಕಿತ್ತು ಹಾಕಲು ಮತ್ತು ಅಲ್ಪಾವಧಿ ದ್ವಿದಳ ದಾನ್ಯಗಳನ್ನು ಸರದಿ ಬೆಳೆಯಾಗಿ ಬಿತ್ತಲು ಸೂಚಿಸಲಾಗಿದೆ. ತಡವಾಗಿ ಬಿತ್ತನೆ ಮಾಡಿದ ಹರ್ಬಸೀಯಂ ಮತ್ತು ಅರ್ಬೋರೀಯಂ ದೇಸಿ ಹತ್ತಿ ಬೆಳೆಗೆ ಪ್ರತಿ ಲೀಟರ್ ನೀರಿಗೆ 1 ಗ್ರಾಂ ಕರ್ಬೆನ್ಡಜಿಮ್ 50WPಯನ್ನು ಬೂದು ಶಿಲೀಂಧ್ರ ರೋಗದ ಪರಿಣಾಮಕಾರಿ ನಿಯಂತ್ರಣಕ್ಕಾಗಿ ಸಿಂಪಡಿಸ ಲು ಸೂಚಿಸಲಾಗಿದೆ. ಹತ್ತಿ ತೊಟ್ಟುಗಳನ್ನು ಸುಡುವುದರ ಬದಲಾಗಿ ಕಾಂಪೋಸ್ಟ್ ತಯಾರಿಕೆಯಲ್ಲಿ ಬಳಸಬಹುದು. ಸೂಕ್ತ ಕಾಂಪೋಸ್ಟ್ ತಯಾರಿಕೆಯ ಸಂಸ್ಕೃತಿಗಳು ಅಥವಾ ಬೆಲೆಯ ಶೇಷಗಳನ್ನು ಕೊಳೆಯಿಸುವ ಸೂಕ್ಷ್ಮಜೀವಿಗಳಾದ ಫೆನೆರೋ ಕೀಟ್, ಪ್ಲುರೋಟಸ್ ಮತ್ತು ಟ್ರೈಕೋಡರ್ಮಗಳನ್ನೂ ಹತ್ತಿ ಬೆಳೆಯ ಶೇಷಗಳನ್ನು ಶೀಘ್ರವಾಗಿ ಕೊಳೆಯಿಸಲು ಬಳಸಬಹುದು. |